

■ ರೂಪ ಹಾಸನ

# ಈ ಕಂದಮ್ಮಗಳಿಗೆ ಎಲ್ಲಿದೆ ಬಿಡುಗಡೆ?

**ವೇಶ್ಯಾವಾಟಿಕೆಯ ಜಾಲದಲ್ಲಿ ಸಿಲುಕಿಕೊಂಡಿರುವ ಅಪ್ರಾಪ್ತ ಹೆಣ್ಣುಮಕ್ಕಳ ಸಂಖ್ಯೆ ದೊಡ್ಡದಿದೆ. ಅವರ ಕಥೆಗಳನ್ನು ಕೇಳತೊಡಗಿದರೆ, ಇಡೀ ವ್ಯವಸ್ಥೆಯ ಬಗ್ಗೆ ಜಿಗುಪ್ಸೆ ಉಂಟಾಗುತ್ತದೆ. 'ಲೈಂಗಿಕ ಕಾರ್ಯಕರ್ತೆಯರ ಸ್ಥಿತಿಗತಿ ಅಧ್ಯಯನ ವರದಿ–2017'ರ ಸದಸ್ಯೆಯಾಗಿ ಕೆಲಸ ಮಾಡಿದ್ದ ಲೇಖಕಿ, ತಾವು ಕಂಡು–ಕೇಳಿದ ಸಂಕಟಗಳನ್ನು ಇಲ್ಲಿ ನಿವೇದಿಸಿಕೊಂಡಿದ್ದಾರೆ.**

ಅವಳು ಹಳ್ಳಿಯೊಂದರ ಕಡು ಬಡ ಕುಟುಂಬದ 13 ವರ್ಷ ವಯಸ್ಸಿನ ಮುಗ್ಧ ಬಾಲೆ. ಅವಳನ್ನು ಬಲವಂತದಿಂದ ನಗರದ ಪ್ರತಿಷ್ಠಿತರೊಬ್ಬರ ಮನೆಯಲ್ಲಿ ಅಪ್ಪ ಮನೆಗೆಲಸಕ್ಕೆ ಸೇರಿಸಿದ್ದಾನೆ. ಆ ಮನೆಯವರ ಬಂಧುವೊಬ್ಬ ಈ ಹುಡುಗಿಗೆ ಬೆಂಗಳೂರಿನಲ್ಲಿ ಒಳ್ಳೆಯ ಕೆಲಸ ಕೊಡಿಸುವ ನೆಪ ಹೇಳಿ ತನ್ನೊಂದಿಗೆ ಕರೆದುಕೊಂಡು ಹೋಗಿ, ಅವಳ ತೀವ್ರ ವಿರೋಧದ ನಡುವೆಯೂ ಗೆಳೆಯರೊಂದಿಗೆ ಸೇರಿ ಅತ್ಯಾಚಾರವೆಸಗಿ, ಬೆಂಗಳೂರಿನ ವೇಶ್ಯಾವಾಟಿಕೆಯೊಂದಕ್ಕೆ ಅವಳನ್ನು ಮಾರಾಟ ಮಾಡಿದ್ದಾನೆ. ಅಲ್ಲಿಂದ ಹೇಗೋ ತಪ್ಪಿಸಿಕೊಂಡು ಬಂದರೂ ಮತ್ತೆ ಮೈ ಮಾರಿಕೊಂಡೇ ಬದುಕು ಸಾಗಿಸುವಂತೆ ಮಾಡಿದೆ ಕ್ರೂರ ವ್ಯವಸ್ಥೆ! ಜರ್ಜರಿತವಾದ ದೇಹ, ಮನಸ್ಸುಗಳನ್ನು ಹೊತ್ತು ಬಿಡುಗಡೆಗೆ ಕಾದು ಕೂತ ಕಂದಮ್ಮಳ ಕಣ್ಣಿನ ನೀರು ಎಂದೋ ಬತ್ತಿಹೋಗಿದೆ. ಆದರೆ ಅವಳ ಕಥೆ ಕೇಳುತ್ತಾ ಕೂತ ನಮ್ಮ ಕಣ್ಣೀರಿಗೆ ಕಟ್ಟೆಗಳೇ ಇಲ್ಲ!

ಇದು ಮತ್ತೊಬ್ಬ ಬಡ ಹೆಣ್ಣಿನ ಕಥೆ. ಅವಳ 14 ವರ್ಷದ ಮಗಳು ನಾಪತ್ತೆಯಾಗಿ, ಪೊಲೀಸರಿಗೆ ದೂರನ್ನು ಕೊಟ್ಟಿದ್ದರೂ ಪತ್ತೆಯಾಗಿರಲಿಲ್ಲ. 'ಚಿಕ್ಕ ವಯಸ್ಸಿಗೇ ಗಂಡ ಸತ್ತಿದ್ದಕ್ಕೆ ಬದುಕಲು ಬೇರೆ ದಾರಿ ಕಾಣದೇ ವೇಶ್ಯಾವಾಟಿಕೆಯ ಜಾಲಕ್ಕೆ ಬಿದ್ದು ನರಳುತ್ತಿದ್ದೇನೆ. ನನ್ನ ಮಗಳನ್ನ ಮಾತ್ರ ಈ ಪಾಪ ಕೂಪಕ್ಕೆ ಎಳೀಬೇಡಿ ಎಂದು ಕೈ ಮುಗಿದು ಬೇಡಿಕೊಂಡೆ. ಆದರೂ ಆ ಪಾಪಿಗಳು ಬಿಡಲಿಲ್ಲ...' ಎಂದವಳು ಗೋಳಾಡುತ್ತಿದ್ದಳು. ತನ್ನ ಮಗಳು ತನ್ನಂತಾಗಬಾರದೆಂದು ಅವಳನ್ನು ಹದ್ದಿನಂತೆ ಕಾಯುತ್ತಾ ವಿದ್ಯಾಭ್ಯಾಸ ಕೊಡಿಸುತ್ತಿದ್ದರೂ ಈ ಅಮಾನುಷ ಜಾಲ ಅವಳನ್ನು ಸೆಳೆದುಕೊಂಡೇಬಿಟ್ಟಿತು. ಈ ತಾಯಿಜೀವ ಅವಿಶ್ರಾಂತವಾಗಿ ಅವಳಿಗಾಗಿ ಹುಡುಕಾಡಿದಾಗ, ಕೆಲ ವರ್ಷಗಳ ನಂತರ ಯಾವುದೋ ಸುಳಿವು ಸಿಕ್ಕು ದೊಡ್ಡ ನಗರದ ವೇಶ್ಯಾಗೃಹವೊಂದರಲ್ಲಿ ಅವಳು ಪತ್ತೆಯಾಗಿದ್ದಳು. ಆದರೆ ಅವಳನ್ನು ವಾಪಸ್ಸು ತರುವ ದಾರಿಗಳೆಲ್ಲವೂ ಮುಚ್ಚಿದ್ದವು. 'ಹೇಗಾದರೂ ಮಾಡಿ ನನ್ನ ಕಂದನ್ನ ಅಲ್ಲಿಂದ ಬಿಡುಗಡೆ ಮಾಡಿ ಕರ್ಕೊಂಡು ಬರ್ತೀರಲ್ವಾ?'